ನೇತ್ರದಾನ ಶ್ರೇಷ್ಠದಾನ

# ಸಮದೃಷ್ಟಿ ಕ್ಷಮತಾ ವಿಕಾಸ ಮತ್ತು ಅನುಸಂಧಾನ ಮಂಡಲ

# ಸ ಕ್ಷ ಮ

ಕರ್ನಾಟಕ ಬೆಂಗಳೂರು

ಕ್ರಮಾಂಕ : MAH/654/2008(n)

## ವಿಶೇಷಚೇತನರ ಕಲ್ಯಾಣಕ್ಕಾಗಿ ಸಮರ್ಪಿತ ರಾಷ್ಟ್ರೀಯ ಸಂಘಟನೆ

# "ಕಾರ್ನಿಯ ಅಂಧತ್ವ ಮುಕ್ತ ಭಾರತ ಅಭಿಯಾನ"

ಆತ್ಮೀಯರೇ....

ಸ್ವತಂತ್ರ ಭಾರತ ಎದುರಿಸುತ್ತಿರುವ ಅನೇಕ ಸವಾಲುಗಳ ಪೈಕಿ ಕಾರ್ನಿಯ ಅಂಧತ್ವ ಎಂಬ ಆರೋಗ್ಯದ ಸವಾಲು ಒಂದು. ಕಾರ್ನಿಯ ಎಂಬುದು ಕಣ್ಣಿನ ಹೊರಭಾಗದಲ್ಲಿನ ಪಾರದರ್ಶಕವಾದ ಭಾಗವಾಗಿದ್ದು ಅನೇಕ ಕಾರಣಗಳಿಂದ ದುರ್ಬಲಗೊಂಡು ಅಂಧತ್ವಕ್ಕೆ ಕಾರಣವಾಗುತ್ತದೆ. ಒಂದು ಅಂದಾಜಿನ ಪ್ರಕಾರ ದೇಶದಲ್ಲಿ 2 ಲಕ್ಷದಿಂದ 20 ಲಕ್ಷ ಕಾರ್ನಿಯ ಅಂದರಿದ್ದು ಇವರಲ್ಲಿ ಮಕ್ಕಳ ಸಂಖ್ಯೆ ಹೆಚ್ಚು. ಕಾರ್ನಿಯ ಅಂಧತ್ವಕ್ಕೆ ನೇತ್ರದಾನದಿಂದ ಮಾತ್ರ ಪರಿಹಾರ ಸಾಧ್ಯವಿದೆ. ದುರದೃಷ್ಟವಶಾತ್ ಪ್ರತಿವರ್ಷ 1 ಕೋಟಿಯಷ್ಟು ಜನ ಸಾವನಪ್ಪುತ್ತಿದ್ದು ನೇತ್ರದಾನಿಗಳ ಸಂಖ್ಯೆ ಕೇವಲ 25ಸಾವಿರ, ಈ ಸಂಖ್ಯೆಯನ್ನು 2 ರಿಂದ 4ಲಕ್ಷಕ್ಕೆ ಹೆಚ್ಚಿಸಿದಲ್ಲಿ, ಎಲ್ಲ ರಾಜ್ಯ, ಜಿಲ್ಲೆಗಳಲ್ಲಿ ನೇತ್ರ ಬ್ಯಾಂಕುಗಳನ್ನು ಸ್ಥಾಪಿಸಿದಲ್ಲಿ ಕಾರ್ನಿಯ ತಜ್ಞರ ಲಭ್ಯತೆಯನ್ನು ಸುಧಾರಿಸಿದಲ್ಲಿ ಮತ್ತು ಅತಿ ಮುಖ್ಯವಾಗಿ ನೇತ್ರದಾನದ ಕುರಿತು ಜನರಲ್ಲಿರುವ ತಪ್ಪು ತಿಳುವಳಿಕೆಗಳನ್ನು ನಿವಾರಿಸಿದಲ್ಲಿ 2020ರ ಹೊತ್ತಿಗೆ ಭಾರತವನ್ನು ಕಾರ್ನಿಯ ಅಂಧತ್ವದಿಂದ ಮುಕ್ತಗೊಳಿಸಬಹುದು. ಈ ಮಹತ್ವಾಕಾಂಕ್ಷೆಯ ಯೋಜನೆ ಯೊಂದಿಗೆ ವಿಶೇಷಚೇತನರ ಸಬಲೀಕರಣಕ್ಕಾಗಿ ಸಮರ್ಪಿತ ರಾಷ್ಟ್ರೀಯ ಸಂಘಟನೆ ಸಕ್ಷಮವು ಕಾರ್ನಿಯ ಅಂಧತ್ವ ಮುಕ್ತ ಭಾರತ ಅಭಿಯಾನಕ್ಕೆ ಮಾರ್ಚ್ 5, 2016ರಂದು ಚಾಲನೆ ನೀಡಿದೆ. ಕಾರ್ನಿಯ ಅಂಧರ ಪಟ್ಟಿ ತಯಾರಿಗೆಗಾಗಿ ಸರ್ವೇಕ್ಷಣೆ, ಕಾರ್ನಿಯ ಅಂಧ–ನೇತ್ರ ಬ್ಯಾಂಕ್, ಕಣ್ಣಿನ ಅಸ್ಪತ್ರೆ, ದಾನಿಗಳ ಸಂಪರ್ಕಜಾಲ ರಚನೆ, ಪಂಚಾಯತ್/ವಾರ್ಡ್‌ಗಳಲ್ಲಿ ನೇತ್ರರಕ್ಷಕರ ನಿಯೋಜನೆ ಅಭಿಯಾನದ ಪ್ರಮುಕ ಅಂಶಗಳಾಗಿವೆ. ಈ ಅಭಿಯಾನವು ವಿವಿಧ ಹಂತಗಳಲ್ಲಿ ನಡೆಯುತ್ತಿದೆ. ಅಭಿಯಾನದ

ಅಂಗವಾಗಿ ಆಗಸ್ಟ್ 25 ರಿಂದ ಸೆಪ್ಟೆಂಬರ್ 8ರ ರಾಷ್ಟ್ರೀಯ ನೇತ್ರದಾನ ಜಾಗೃತಿ ಪಾಕ್ಷಿಕ ಅಚರಣೆಯ ಸಂದರ್ಭದಲ್ಲಿ ಜಾಥಾ, ಬ್ಲೈಂಡ್ ವಾಕ್, ಬೀದಿ ನಾಟಕ ಶಾಲಾ ಕಾಲೇಜುಗಳಲ್ಲಿ ವಿವಿಧ ಸ್ಪರ್ಧೆಗಳು, ಮಾನವ ಸರವಳಿ ರಚನೆ, ಮನೆ–ಮನೆ ಸಂಪರ್ಕ, ಲೇಖನ ಪ್ರಕಟನೆ, ಜಾಗೃತಿ ಕಾರ್ಯಕ್ರಮಗಳು ಇತ್ಯಾದಿಗಳನ್ನು ಹಮ್ಮಿಕೊಳ್ಳುತ್ತಿದೆ. ಸ್ವಯಂ ಸೇವಕರು ಅಭಿಯಾನವನ್ನು ಕರ್ನಾಟಕ ರಾಜ್ಯದ ಮನೆ–ಮನಗಳಿಗೆ ಹೊಯ್ಯಲಿದ್ದಾರೆ. ಬನ್ನಿ ಸಹೃದಯರೆಲ್ಲ ಇಂದೇ ನೇತ್ರದಾನದ ಸಂಕಲ್ಪ ಮಾಡೋಣ ದೃಷ್ಟಿ ರಾಯಭಾರಿಗಳಾಗಿ ಪ್ರತಿ ಭಾರತೀಯನನ್ನು ನೇತ್ರದಾನಿಯಾಗಿಸೋಣ. ಈ ಸಮಾಜ ಪರಿವರ್ತನೆಯ ರಾಷ್ಟ್ರವ್ಯಾಪಿ ಜನಾಂದೋಲಲದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳೋಣ. ಭಾರತವನ್ನು ಕಾರ್ನಿಯ ಅಂಧತ್ವ ಮುಕ್ತ ರಾಷ್ಟ್ರವಾಗಿಸೋಣ.

## "ತಮಸೋಮ ಜ್ಯೋತಿರ್ಗಮಯ"

ಕಣ್ಣುಗಳು ನಮ್ಮ ಸುತ್ತಲಿನ ಭೌತಿಕ ಪ್ರಪಂಚದ ಮಧುರ ಅನುಭವ ನೀಡುವ ಅತಿಮುಖ್ಯ ಇಂದ್ರಿಯವಾಗಿದೆ. ಲಕ್ಷಾಂತರ ಭಾರತೀಯರು ಕಾರ್ನಿಯ ಅಂಧತ್ವದ ಕಾರಣದಿಂದ ಕಣ್ಣುಗಳು ನೀಡುವ ಮಧುರ ಅನುಭವದಿಂದ ವಂಚಿತರಾಗಿದ್ದಾರೆ. ಕಾರ್ನಿಯ ಅಂಧತ್ವವು ಪರಿಹಾರವುಳ್ಳ ನೇತ್ರ ಸಮಸ್ಯೆಯಾಗಿದ್ದು ನೇತ್ರದಾನ ಈ ರಾಷ್ಟ್ರೀಯ ಸಮಸ್ಯೆಗೆ ಸುಲಭ ಹಾಗು ಸರಳ ಪರಿಹಾರವೆನಿಸಿದೆ. ದುರದೃಷ್ಟವಶಾತ್  ಮಾಹಿತಿಯ ಕೊರತೆ, ತಪ್ಪು ತಿಳುವಳಿಕೆ, ತಪ್ಪು ಗ್ರಹಿಕೆಗಳಿಂದಾಗಿ ಭಾರತದಲ್ಲಿ ನೇತ್ರದಾನ ಸಾಮಾಜಿಕ ಪರಂಪರೆ ಆಗದಿರುವುದು ಮತ್ತು  ನೇತ್ರದಾನದ ಪ್ರಮಾಣ ಅತ್ಯಲ್ಪವಾಗಿದ್ದು ಕಾರ್ನಿಯ ಕೊರತೆ ಅಪಾರವಾಗಿದೆ.

ನೆರಯ ರಾಷ್ಟ್ರ ಶ್ರೀಲಂಕಾದಲ್ಲಿ ಪರಿಸ್ಥಿತಿ ತದ್ವಿರುದ್ಧವಾಗಿದೆ. ಶ್ರೀಲಂಕಾದಲ್ಲಿ ಕಾರ್ನಿಯ ಅಂಧತ್ವದ ಒಂದು ಪ್ರಕರಣವು ಕಂಡು ಬರುವುದಿಲ್ಲ, ಏಕೆಂದರೆ ಅದು ಕಣ್ಣುಗಳನ್ನು ರಾಷ್ಟ್ರೀಯ ಆಸ್ತಿ ಎಂದು ಘೋಷಿಸಿದೆ ಮತ್ತು ನೇತ್ರದಾನ ಕಡ್ಡಾಯಗೊಳಿಸಿದೆ. ಅಷ್ಟೇ ಅಲ್ಲದೆ ಯೂರೋಪ್ ಮತ್ತು ಅಮೇರಿಕಾ ಖಂಡದ ರಾಷ್ಟ್ರಗಳಿಗೆ ಉಚಿತವಾಗಿ ಕಾರ್ನಿಯ ಒದಗಿಸುತ್ತಿದೆ. ಶ್ರೀಲಂಕಾದ ಈ ಸಾಧನೆ ನಮಗೇಕೆ ಪ್ರೇರಣೆ ನೀಡಬಾರದು ? ಶಿವನಿಗೆ ಕಣ್ಣು ನೀಡಿದ ಕಣ್ಣಪ್ಪನ ಕಥೆ ನಮಗೆ ನೆನಪಿಲ್ಲವೇ? ಶಾರೀರಿಕ ಮತ್ತು ಬೌದ್ಧಿಕ ಸವಾಲುಳ್ಳವರ ಸರ್ವಾಂಗೀಣ ವಿಕಾಸಕ್ಕಾಗಿ ಕಾರ್ಯಶೀಲವಾಗಿರುವ ರಾಷ್ಟ್ರೀಯ ದಾನಶೀಲ ಸಂಘಟನೆ ಸಕ್ಷಮವು ನೇತ್ರದಾನದ ಕುರಿತು ಜನಜಾಗರಣದ ಸಾಮಾಜಿಕ ಚಳುವಳಿಯಲ್ಲಿ ನಿರತವಾಗಿದೆ ಮತ್ತು ನಿಮ್ಮ ಸಕ್ರಿಯ ಸಹಕಾರವನ್ನು ಅಪೇಕ್ಷಿಸುತ್ತದೆ. ನೇತ್ರಗಳು ರಾಷ್ಟ್ರೀಯ ಸಂಪನ್ಮೂಲವೆಂದು ಘೋಷಿತವಾಗಬೇಕು ನೇತ್ರದಾನ ರಾಷ್ಟ್ರೀಯ ಪರಂಪರೆಯಾಗಬೇಕು ಎಂಬ ಸಕ್ಷಮದ ಸಾಮಾಜಿಕ ಬೇಡಿಕೆಯನ್ನು ಬೆಂಬಲಿಸಿ ಇಂದೇ ನೇತ್ರದಾನ ಸಂಕಲ್ಪ ಮಾಡಿರಿ.

ನೇತ್ರದಾನದ ಪುಣ್ಯ ಕಾರ್ಯವು ಇಬ್ಬರು ಕಾರ್ನಿಯ ಅಂಧರಿಗೆ ದೃಷ್ಟಿ ನೀಡಬಲ್ಲದು. ಸಣ್ಣ ಪ್ರಯತ್ನ ದೊಡ್ಡ ರಾಷ್ಟ್ರೀಯ ಸಮಸ್ಯೆಗೆ ಪರಿಹಾರ ನೀಡಬಲ್ಲದು. ಹೀಗಾಗಿ ಸಕ್ಷಮದ ಈ ಸಾಮಾಜಿಕ ಪ್ರಯತ್ನಕ್ಕೆ ನೇತ್ರದಾನ ಸಂಕಲ್ಪದ ಮೂಲಕ ಸಹಕರಿಸಬೇಕಾಗಿ ನಿಮ್ಮಲ್ಲಿ ಸವಿನಯ ಪ್ರಾರ್ಥನೆ.

## ಸಕ್ಷಮ ಮತ್ತು ನೇತ್ರದಾನ

ಸಮದೃಷ್ಟಿ ಕ್ಷಮತಾ ವಿಕಾಸ ಮತ್ತು ಅನುಸಂಧಾನ ಮಂಡಲ (ಸಕ್ಷಮ) ವಾಕ್ ಶ್ರವಣ, ದೃಷ್ಟಿ, ಚಲನವಲನ ಇತ್ಯಾದಿ ಶಾರೀರಿಕ ಮತ್ತು ಬೌದ್ಧಿಕ ಸವಾಲುಳ್ಳ ದೇಶ ಬಾಂಧವರ ಸರ್ವಾಂಗೀಣ ವಿಕಾಸಕ್ಕಾಗಿ  ಕಾರ್ಯಶೀಲವಾಗಿರುವ ರಾಷ್ಟ್ರೀಯ ಸಂಘಟನೆ.

ಶಾರೀರಿಕ ಮತ್ತು ಬೌದ್ಧಿಕ ಸವಾಲಿನ ಪರಿಣಾಮವಾಗಿ, ಸಾಮಾಜಿಕ ಉಪೇಕ್ಷೆಗೆ ಗುರಿಯಾಗಿ ರಾಷ್ಟ್ರೀಯ ಮುಖ್ಯವಾಹಿನಿಯಿಂದ ದೂರವಾಗಿರುವ ದೇಶಬಾಂಧವರನ್ನು ಸಂಘಟಿಸಿ, ರಾಷ್ಟ್ರನಿರ್ಮಾಣದ ಪ್ರಕ್ರಿಯೆಯಲ್ಲಿ ಸಕ್ರಿಯ ಪಾಲುದಾರಿಕೆಯನ್ನು ಸುನಿಶ್ಚಿತಗೊಳಿಸಿ, ಸಕ್ಷಮ ಭಾರತ ನಿರ್ಮಾಣದ ಧ್ಯೇಯಕ್ಕಾಗಿ ಕಾರ್ಯೋನ್ಮುಖವಾಗಿದೆ.

ಕಣ್ಣುಗಳು ರಾಷ್ಟ್ರೀಯ ಸಂಪತ್ತು ಎಂದು ಘೋಷಿತವಾಗಬೇಕು. ನೇತ್ರದಾನ ರಾಷ್ಟ್ರೀಯ ಪರಂಪರೆಯಾಗಬೇಕು ಎಂಬ ಸಕ್ಷಮದ ರಾಷ್ಟ್ರೀಯ ಬೇಡಿಕೆಗೆ ಪೂರಕವಾಗಿ ಸಕ್ಷಮವು ದೇಶಾದ್ಯಂತ 31ಕ್ಕೂ ಅಧಿಕ ನೇತ್ರ ಬ್ಯಾಂಕ್ ಮತ್ತು ಕಾರ್ನಿಯ ಸಂಗ್ರಹಣ ಕೇಂದ್ರಗಳನ್ನು ನಡೆಸುತ್ತಿದೆ.

ಅಲ್ಪದೃಷ್ಟಿ ವಿಕಸನ ಕೇಂದ್ರ, ನೇತ್ರದಾನ ಮಾಹಿತಿ ಕೇಂದ್ರ, ಉಚಿತ ನೇತ್ರ ತಪಾಸಣಾ ಶಿಬಿರಗಳ ಆಯೋಜನೆ ಉಚಿತ ನೇತ್ರದಾನ ಜಾಗೃತಿ ಕಾರ್ಯಕ್ರಮಗಳು, ಜಾತಾ ಮತ್ತು ಯಾತ್ರೆಗಳು ಸಕ್ಷಮದ ಪ್ರಮುಖ ಚಟುವಟಿಕೆಗಳಾಗಿವೆ.

## ನೇತ್ರದಾನದ ಮಾಹಿತಿಗಳು

* ನೇತ್ರದಾನ ಮತ್ತು ಸಂಗ್ರಹಣೆ ಮರಣಾ ನಂತರದ ಪ್ರಕ್ರಿಯೆಯಾಗಿದೆ.
* ನೇತ್ರ ಸಂಗ್ರಹಣೆಗೆ ಬೇಕಾದ ಸಮಯ ಕೇವಲ 20 ನಿಮಿಷ ಮಾತ್ರ.
* ನೇತ್ರದಾನದ ನಂತರ ದಾನಿಯ ಮುಖ ವಿರೂಪಗೊಳ್ಳುವುದಿಲ್ಲ. ಮರಣ  ಸಂಭವಿಸಿದ 6 ಗಂಟೆಯೊಳಗೆ ನೇತ್ರದಾನವನ್ನು ಮಾಡಬೇಕು.
* ಒಬ್ಬರ ನೇತ್ರದಾನದಿಂದ ಇಬ್ಬರು ವ್ಯಕ್ತಿಗಳಿಗೆ ದೃಷ್ಟಿನೀಡಬಹುದು.

* ಮಧುಮೇಹ, ಬಿ.ಪಿ. ದೃಷ್ಟಿದೋಷ, ಇತ್ಯಾದಿ ಆರೋಗ್ಯ ಸಮಸ್ಯೆಗಳಿಗೆ ಚಿಕಿತ್ಸೆ ಪಡೆಯುತ್ತಿರುವವರು ಮತ್ತು ಮೂರು ತಿಂಗಳ ಶಿಶು ಸೇರಿದಂತೆ ವಯಸ್ಸಾದ ವೃದ್ಧರು ಸಹ ನೇತ್ರದಾನ ಮಾಡಬಹುದು.
* ಕಾರ್ನಿಯಾ ಸಂಗ್ರಹಣೆ ಮತ್ತು ವಿತರಣೆ ಸಂಪೂರ್ಣ ಉಚಿತವಾದ ಪ್ರಕ್ರಿಯೆ.
* ದಿನದ 24 ಗಂಟೆಯು ನೇತ್ರ ಸಂಗ್ರಹಣೆ ಮಾಡಲಾಗುತ್ತದೆ.
* ನೀವು ನಿಮ್ಮ ಬಂಧುಗಳು ಮತ್ತು ಸ್ನೇಹಿತರು ಇಂದೇ ನೇತ್ರದಾನದ ಸಂಕಲ್ಪದೊಂದಿಗೆ ಯಾವುದೇ ನೇತ್ರಬ್ಯಾಂಕ್‌ನಲ್ಲಿ ನೋಂದಣೆ ಮಾಡಿಸಿ
* ನೋಂದಣಿ ಖಡ್ಡಾಯವಲ್ಲ.
* ನಾವು ನೇತ್ರದಾನ ಮಾಡಿರುವ ವಿಷಯವನ್ನು ಕುಟುಂಬ ಸದಸ್ಯರಿಗೆ ಮತ್ತು ಹತ್ತಿರದ ಬಂಧುಗಳಿಗೆ ತಪ್ಪದೇ ತಿಳಿಸುವುದು.

## ಮರಣ ಸಂಭವಿಸಿದಾಗ :

1. ಮರಣ ಸಂಭವಿಸಿದಾಗ ದಾನ ಮಾಡಿದವರ ಕಣ್ಣುಗಳನ್ನು ಮುಚ್ಚಬೇಕು.
2. ತಲೆದಿಂಬಿನ ಸಹಾಯದಿಂದ ಶಿರಭಾಗವನ್ನು ಎತ್ತರಿಸಬೇಕು ಮತ್ತು ಸಾದ್ಯವಾದರೆ ಪ್ಲಾಸ್ಟಿಕ್‌ನಲ್ಲಿ ಮಂಜುಗಡ್ಡೆಯನ್ನು ಹಣೆಯ ಮೇಲೆ ಇರಿಸುವುದು.
3. ಫ್ಯಾನ್ ಮತ್ತು ಎ.ಸಿ. ಯನ್ನು ಸ್ಥಗಿತಗೊಳಿಸುವುದನ್ನು ಮರೆಯಬಾರದು, ತಕ್ಷಣವೇ ಹತ್ತಿರದ ಸರ್ಕಾರಿ ಅಥವಾ ಖಾಸಗಿ ನೇತ್ರಬ್ಯಾಂಕ್‌ಗೆ ತಿಳಿಸುವುದು. ಅಥವಾ 104ಕ್ಕೆ **080–28542727 / 26707176 / 66121300 / 26634200.** ಕರೆಮಾಡಿರಿ.

"ದಯಾಮಾಡಿ ನಿಮ್ಮ ಕಣ್ಣುಗಳನ್ನು ಮಣ್ಣು ಮಾಡಬೇಡಿ ಅಥವಾ ಸುಡಬೇಡಿ
ನಿಮ್ಮ ಸಣ್ಣ ಪ್ರಯತ್ನ ಇಬ್ಬರು ಕಾರ್ನಿಯ ಅಂಧರಿಗೆ ದೃಷ್ಟಿ ನೀಡಬಲ್ಲದು"

**"ಬದುಕಿರುವವರೆಗೆ ರಕ್ತದಾನ ಬದುಕಿನ ನಂತರ ನೇತ್ರದಾನ"**


# ಸಕ್ಷಮ

## ಕರ್ನಾಟಕ ಘಟಕ

**ನಂ.55, ಯಾದವಸ್ಮೃತಿ, ಲಿಂಕ್‌ರಸ್ತೆ, ಶೇಷಾದ್ರಿಪುರಂ, ಬೆಂಗಳೂರು–560020**

ON WEB: www.sakshamakarnataka.org | www.sakshamseva.org | www.camba.org.in
E-MAIL: sakshama.karnataka@gmail.com | FaceBook: Sakshama Karnataka
**Mobile : 9986699710, 9243132984, 9611164646, 9886559339**